ಆ) ಸಮಿತಿಯ ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳಲಾಗುವುದು.

ವಿಷಯ:- ಸುಳ್ಯದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 103 (658)

ಶ್ರೀ ಎಸ್.ಅಂಗಾರ (ಸೂಳ್ಯ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಒಟ್ಟು ಸಂಖ್ಯೆ ಎಷ್ಟು?

ಆ) ಅವುಗಳನ್ನು ಭರ್ತಿ ಮಾಡಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) -- ಆರು --

ಆ) ಸುಳ್ಯ ತಾಲ್ಲೂಕು ಪಂಜ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಖಾಲಿ ಇದ್ದ ವೈದ್ಯರ ಹುದ್ದೆಗಳನ್ನು ಸರ್ಕಾರಿ ಆದೇಶ ಸಂಖ್ಯೆ: ಆಕುಕ 63 ಹೆಚ್ ಎಸ್ ಹೆಚ್ 95, ದಿನಾಂಕ 102 1995 ರಲ್ಲಿ ಒಬ್ಬ ಗುತ್ತಿಗೆ ವೈದ್ಯರನ್ನು ನೇಮಕಾತಿ ಮಾಡಿ ಭರ್ತಿ ಮಾಡಲಾಗಿದೆ. ಉಳಿದಿರುವ 5 ಖಾಲಿ ಹುದ್ದೆಗಳನ್ನು ಮುಂದೆ ಸ್ನಾಕೋತ್ತರ ವ್ಯಾಸಂಗ ಮುಗಿಸಿ ಹಿಂದಿರುಗುವ ವೈದ್ಯರಿಂದ ಅಥವಾ ಗುತ್ತಿಗೆ ಆಧಾರದ ಇನ್ನೊಂದು ತಂಡದಿಂದ ನೇಮಕಾತಿ ಮಾಡಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು

ವಿಷಯ:- ಆರಣ್ಯ ಇಲಾಖೆಯ ಅನುಮತಿ ಇಲ್ಲದೆ ಭಾರತೀನಗರ ಮತ್ತು ಜಯಮಹಲ್ ಕ್ಷೇತ್ರದಲ್ಲಿ ಮರಗಳನ್ನು ಕಡಿದಿರುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 248(617)

ಶ್ರೀ ಎನ್.ರಾಜಣ್ಣ (ಭಾರತೀನಗರ):- ಮಾನ್ಯ ಆರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಭಾರತಿ ನಗರ ಮತ್ತು ಜಯಮಹಲ್ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬಹುಮಹಡಿ ಕಟ್ಟಡಗಳನ್ನು ನಿರ್ಮಿಸಲು ಅನೇಕ ಮರಗಳನ್ನು ಕಿತ್ತು ತೆಗೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮರಗಳನ್ನು ಕಡಿಯಲು ಆರಣ್ಯ ಇಲಾಖೆಯ ಅನುಮತಿ ಪಡೆಯಲಾಗಿದೆಯೆ?

ಇ) ಇಂತಹ ಸ್ಥಳಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹೊಸ ಗಿಡಗಳನ್ನು ನಡೆಲಾಗಿದೆಯೆ?

ಈ) ಆರಣ್ಯ ಇಲಾಖೆಯ ಅನುಮತಿ ಪಡೆಯದೆ ಮರಗಳನ್ನು ಕಡಿದರೆ ಏನು ಕ್ರಮ ಕೈಗೊಳ್ಳಲಾಗುತ್ತಿದೆ?

ಶ್ರೀ ಹೆಚ್.ವೈ.ಮೇಟ(ಆರಣ್ಯ ಸಚಿವರು):-

ಅ) -- ಇಲ್ಲ --

ಆ) ಭಾರತಿನಗರ ಮತ್ತು ಜಯಮಹಲ್ ಕ್ಷೇತ್ರದ ಸಾರ್ವಜನಿಕರಿಂದ ದಿನಾಂಕ 1-11-1994 ರಿಂದ ಹೊಸ ಕಟ್ಟಡ ಕಟ್ಟಲು ಹಾಲಿ ಕಟ್ಟಡಗಳಿಗೆ ಹಾಗೂ ಸಂಚಾರಕ್ಕೆ ಅಡಚಣೆ ಉಂಟು ಮಾಡುತ್ತಿದ್ದ ಮರಗಳನ್ನು ತೆಗೆಯಲು ಸಾರ್ವಜನಿಕರಿಂದ ಅನುಮತಿಗಾಗಿ ವೃಕ್ಷಾಧಿಕಾರಿ ಆದ ಉಪ ಆರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಇವರು 86 ಅರ್ಜಿಗಳನ್ನು ಸ್ವೀಕರಿಸಿರುವರು. ಇವುಗಳ ಪೈಕಿ ಮರ ಸಂರಕ್ಷಣಾ ಕಾಯ್ದೆ 1976ರ ನಿಯಮದ ಪ್ರಕಾರ 64 ಪ್ರಕರಣಗಳನ್ನು ಇತ್ಯರ್ಥಪಡಿಸಿ 120 ಮರಗಳನ್ನು ಕಡಿಯಲು ಅನುಮತಿ ನೀಡಲಾಗಿರುತ್ತದೆ. ಉಳಿದ 22 ಪ್ರಕರಣಗಳನ್ನು ತಿರಸ್ಕರಿಸಲಾಗಿರುತ್ತದೆ.

ಇ) -- ಹೌದು --

ಈ) ಖಾಸಗಿ ಹಿಡುವಳಿ ಜಮೀನಿನಲ್ಲಿಯ ಮರಗಳನ್ನು ವೃಕ್ಷಾಧಿಕಾರಿಯ ಪೂರ್ವಾನುಮತಿ ಪಡೆಯದೆ ಕಡಿದರೆ ಗುನ್ನೆ ಪ್ರಕರಣ (offence case) ದಾಖಲು ಮಾಡಿಕೊಂಡು ಕಡಿದ ಮರಗಳಿಂದ ತಯಾರಿಸಿದ ಕಟ್ಟಿಗೆಯನ್ನು ಜಪ್ತಿ ಮಾಡಿ ವಶಪಡಿಸಿಕೊಳ್ಳಲಾಗುತ್ತಿದೆ. ಇದಲ್ಲದೆ ಗುನ್ನೆ ಪ್ರಕರಣವನ್ನು ರಾಜಿ ಕಬೂಲಿಯಿಂದ ಬಗೆಹರಿಸಿಕೊಂಡರೆ, ಪರವಾನಗಿ ಪಡೆಯದೆ ಮರ ಕಡಿದಿರುವುದಕ್ಕೆ ದಂಡ ಹಾಕಲಾಗುತ್ತದೆ ಮತ್ತು ಕಡಿದ ಮರದಿಂದ ತಯಾರಿಸಿದ ಕಟ್ಟಿಗೆಯನ್ನು ಅದರ ಕಿಮ್ಮತ್ತು ವಸೂಲು ಮಾಡಿ ಬಿಟ್ಟು ಕೊಡಲಾಗುತ್ತಿದೆ.

ವಿಷಯ:- ಭಾರತೀನಗರ ವ್ಯಾಪ್ತಿಯಲ್ಲಿ ಬರುವ ಪ್ರಥಮ ದರ್ಜೆ ಕಾಲೇಜುಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 249(616)

ಶ್ರೀ ಎನ್. ರಾಜಣ್ಣ (ಭಾರತೀನಗರ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಭಾರತೀನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ?

2) ಅವುಗಳಲ್ಲಿ ಎಷ್ಟು ಕಾಲೇಜುಗಳಿಗೆ ಸರಿಯಾಗಿ ಪೀಠೋಪಕರಣಗಳು ಮತ್ತು ಕಪ್ಪು ಹಲಗೆಗಳನ್ನು ಒದಗಿಸಿರುವುದಿಲ್ಲ.

3) 1994-95ನೇ ಸಾಲಿನಲ್ಲಿ ಪೀಠೋಪಕರಣಗಳಿಗಾಗಿ ಮತ್ತು ಕಪ್ಪು ಹಲಗೆ ಒದಗಿಸುವುದಕ್ಕಾಗಿ ಖರ್ಚಾಗಿರುವ ಮೊತ್ತ.

4) ಸರ್ಕಾರದ ಭಾರತೀನಗರ ವಿಧಾನ ಸಭಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಪೀಠೋಪಕರಣ ಮತ್ತು ಇತರೇ ಉಪಕರಣಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳುವುದೇ.

ಶ್ರೀ ಡಿ.ಮಂಜುನಾಥ್(ಉನ್ನತ ಶಿಕ್ಷಣ ಸಚಿವರು):-

1) ಭಾರತೀನಗರ ವಿಧಾನ ಸಭಾ ಕ್ಷೇತ್ರದಲ್ಲಿ ಯಾವುದೇ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಇಲ್ಲ.